ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ; ನ್ಯಾಯಾಲಯ, ಶ್ರೀರಂಗಪಟ್ಟಣ.

ಸಾಕ್ಷಿಗೆ ಪ್ರಮಾಣ ವಚನ ಮಾಡಲಾದ ದಿ : 09.06.2023
ಮು. ಮುಖ್ಯ ವಿಚಾರಣೆ : ವಾದಿ ಪರ ವಕೀಲರಿಂದ

ಪ್ರತಿವಾದಿ ದಿಃ 06.03.2020 ರಂದು ಎರಡು ಆನ್ ಡಿಮ್ಯಾಂಡ್ ಪ್ರನೋಟ್ ಹಾಗೂ ಹಣಸಂದ ರಶೀದಿಗಳನ್ನು ಬರೆಸಿಕೊಟ್ಟಿರುತ್ತಾರೆ. ಆನ್ ಡಿಮ್ಯಾಂಡ್ ಪ್ರನೋಟ್‌ಗಳು ಹಾಗೂ ಹಣಸಂದ ರಶೀದಿಗಳನ್ನು ಕ್ರಮವಾಗಿ ನಿಪಿ.1 ರಿಂದ ನಿಪಿ.4 ಎಂದು ಗುರುತಿಸಲಾಯಿತು. ನಿಪಿ.1 ರಿಂದ 4 ಅನ್ನು ಬಿ.ಕೆ.ಲೋಕೇಶ್ ಎನ್ನುವವರು ತಯಾರಿಸಿರುತ್ತಾರೆ. ನಿಪಿ.2 ಮತ್ತು 4 ದಾಖಲೆಗಳಿಗೆ ಸಾಕ್ಷಿಗಳಾಗಿ ಗೋವಿಂದರಾಜು ಹಾಗೂ ನವೀನ್ ಎನ್ನುವವರು ಸಹಿ ಮಾಡಿರುತ್ತಾರೆ. ಪ್ರತಿವಾದಿ, ಸಾಕ್ಷಿಗಳು ಹಾಗೂ ಪತ್ರಬರಹಗಾರರು ತಮ್ಮ ಸಹಿಗಳನ್ನು ಹಾಕಿರುತ್ತಾರೆ.

ಪ್ರತಿವಾದಿ, ಸಾಕ್ಷಿಗಳು ಹಾಗೂ ಪತ್ರಬರಹಗಾರರ ಸಹಿಗಳನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ಸದರಿಯವರ ಸಹಿಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ.1(ಎ), ನಿಪಿ.2(ಎ), ನಿಪಿ.3(ಎ), ನಿಪಿ.4(ಎ), ನಿಪಿ.2(ಬಿ), ನಿಪಿ.4(ಬಿ), ನಿಪಿ.2(ಸಿ), ನಿಪಿ.4(ಸಿ), ನಿಪಿ.1(ಬಿ), ನಿಪಿ.2(ಡಿ), ನಿಪಿ.3(ಬಿ) ಹಾಗೂ ನಿಪಿ.4(ಡಿ) ಎಂದು ಗುರುತಿಸಲಾಯಿತು.

ನಾನು ದಿಃ 23.11.2020 ರ ನೋಟೀಸ್ ನ ಕಛೇರಿ ಪ್ರತಿ ಹಾಗೂ ದಿಃ 12.12.2020 ರ ಪ್ರತಿ ನೋಟೀಸ್ ಹಾಜರುಪಡಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ.5 ಮತ್ತು 6 ಎಂದು ಗುರುತಿಸಲಾಯಿತು.

ಆದ್ದರಿಂದ ನಾನು ಸಲ್ಲಿಸಿರುವ ದಾವೆಯನ್ನು ಡಿಕ್ರಿ ಮಾಡಬೇಕಾಗಿ ಪ್ರಾರ್ಥಿಸುತ್ತೇನೆ.

ಪಾಟಿ ಸವಾಲುಃ ಪ್ರತಿವಾದಿಗಳ ಪರ

ಪ್ರತಿವಾದಿಗಳ ಪರ ವಕೀಲರು ಸಾಕ್ಷಿಯ ಪಾಟಿ ಸವಾಲಿಗಾಗಿ ಸಮಯಾವಕಾಶ ಕೋರಿದ್ದು ನೀಡಲಾಗಿದೆ.

ನನ್ನ ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಸಾ.ಓ.ಹೇ.ಸ.ಒ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ., ಶ್ರೀರಂಗಪಟ್ಟಣ.